**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 1095/2018**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಪಿ.ಗುಡ್ಡಪ್ಪಾ** | **ಪಿ.ಡಬ್ಲ್ಯೂ-01** |
| **ತಂದೆಯ ಹೆಸರು** | **:** | **ನಿಂಗಪ್ಪ** | **ಸಿ.ಡಬ್ಲ್ಯೂ-01** |
| **ವಯಸ್ಸು** | **:** | **37 ವರ್ಷ** | |
| **ಉದ್ಯೋಗ** | **:** | **ವಲಯ ಅರಣ್ಯ ಅಧಿಕಾರಿ, ಕೂಡ್ಲಿಗಿ ವಲಯ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 11.08.2026.** |
| **ವಾಸಸ್ಥಳ** | **:** | **ಕೂಡ್ಲಿಗಿ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿಃ18.05.2012 ರಿಂದ ದಿಃ26.07.2017 ರವರೆಗೆ ಸಂಡೂರನಲ್ಲಿ ಉಪವಲಯ ಅರಣ್ಯ ಅಧಿಕಾರಿ ಅರ್.ಎಂ.ಬಿ ಶಾಖೆಯಲ್ಲಿ ಕೆಲಸ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್.ಎಂ ಬ್ಲಾಕ್ ನ ಸುಶೀಲಾನಗರ ಗಸ್ತುವಿನಲ್ಲಿ ಪಾರಿವಾಳ ಕೊಳ್ಳ ಎಂಬ ಅರಣ್ಯ ಪ್ರದೇಶದಲ್ಲಿ ಸುಮಾರು 3 ಎಕರೆ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿದ ಬಗ್ಗೆ ಮಾಹಿತಿ ಬಂದಿರುತ್ತದೆ. ಅದರಲ್ಲಿ ಬೊರವೆಲ್ ಮತ್ತು ನೀರಿನ ತೊಟ್ಟಿಯ ಮೂಲಕ, ಪೈಪ ಲೈನ್ ಮೂಲಕ ಗಣಿ ಗುತ್ತಿಗೆ ಪ್ರದೇಶದಲ್ಲಿ ನೀರಿನ ಸರಬರಾಜು ಮಾಡಿರುತ್ತಾರೆ. ಇದನ್ನು ವೀರಭದ್ರಪ್ಪ ಸಂಗಪ್ಪ ಗಣಿ ಗುತ್ತಿಗೆದಾರರು, ಅವರ ಮೈನಿಂಗ ನಂಃ2296, ರವರು ಒತ್ತುವರಿ ಮಾಡಿರುತ್ತಾರೆ.

ನೀರಿನ ತೊಟ್ಟಿ 10 X 10 ಮೀಟರ್ ಇರುತ್ತದೆ. 3 ಬೊರವೆಲ್, ಮತ್ತು ಡಿ.ಜಿ ಸೆಟ್‌ಗೆ ಇರುವ ತಗಡಿನ ಶೇಡ್, ಮತ್ತು ಕಾವಲುಗಾರರ ಒಂದು ಶೆಡ್ ಗಳು ಒತ್ತುವರಿಯಾಗಿರುವ ಪ್ರದೇಶದಲ್ಲಿ ಕಂಡು ಬಂದಿರುತ್ತದೆ. ಅವುಗಳನ್ನು ಇಲಾಖಾ ವಶಕ್ಕೆ ಜಪ್ತು ಪಡೆಸಿಕೊಂಡಿರುತ್ತೇವೆ. ನಂತರ ಅವರ ವಿರುದ್ದ ಅರಣ್ಯ ಮೊಕದ್ದಮೆ ದಾಖಲಿಸಿರುತ್ತೇವೆ.

ದಿಃ14.09.2015 ರಂದು 1 ತಾಸು ಪಂಚನಾಮೆಯನ್ನು ಚಾಸಾ2 ಮತ್ತು 3 ರವರ ಸಮಕ್ಷಮ ಮಃ12.30 ರಿಂದ 1.30 ರವರೆಗೆ ಮಾಡಿರುತ್ತೇನೆ. ಜಪ್ತು ಪಡೆಸಿದ

ಎಲ್ಲ ವಸ್ತುಗಳನ್ನು ಸುರಕ್ಷತೆಗಾಗಿ ಸುಶೀಲಾನಗರ ಗಸ್ತುವಿನ ಅರಣ್ಯ ರಕ್ಷಕರ ವಶಕ್ಕೆ ನೀಡಲಾಗಿರುತ್ತದೆ.

ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಮೂನೆ 20 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಜಪ್ತು ಪಡೆಸಿಕೊಂಡಿರುವ ಮು.ಮಾ ಗಳನ್ನು ಅರಣ್ಯ ರಕ್ಷಕರವರ ಸ್ವಾಧೀನದಲ್ಲಿ ಕೊಟ್ಟಿರುವ ಸ್ವಾಧೀನ ಪತ್ರದಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವ ಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಕಾಶೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎ.ವಿ.ಕೆ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**